**C.Misc 39/17**
**ಆರ್. ಡಬ್ಲೂ-1**

**ದಿನಾಂಕಃ 19.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು :- ಅರ್ಜಿದಾರರ ಪರ ವಕೀಲರಿಂದಃ-**

ಈಗ ಯಾರ ಜೊತೆ ವಾಸ ಇದ್ದೀರಾ ಎಂದರೆ ನಾನು ಒಬ್ಬನೇ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಶಾಂತ ಅವರ ಜೊತೆ ವಾಸ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ಶಾಂತ ಅವರ ಜೊತೆ ವಾಸ ಇದ್ದು, ಒಟ್ಟಿಗೆ ಹೊಟೇಲ್ ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರಳು ನನ್ನ ಸಹೋದರ ಸಂಬಂಧಿ ಎಂದರೆ ಸರಿಯಲ್ಲ. ನಾನು ಮತ್ತು ಅರ್ಜಿದಾರಳು ಪರಸ್ಪರ ಪ್ರೀತಿಸಿ ಮದುವೆಯಾಗಿರುತ್ತೇವೆ ಎಂದರೆ ಸರಿ. ನಾನು ಮತ್ತು ಅರ್ಜಿದಾರಳು ಓಡಿ ಬಂದು ಗದ್ದಿಗೆ ದೇವಸ್ಥಾನದಲ್ಲಿ ಮದುವೆ ಆಗಿರುತ್ತೇವೆ ಎಂದರೆ ಸರಿಯಲ್ಲ. 2015 ವರೆಗೂ ನಾನು ಮತ್ತು ಅರ್ಜಿದಾರರು ಒಟ್ಟಿಗೆ ಇದ್ದೇವು ಎಂದರೆ ಸರಿಯಲ್ಲ. ಆ ರೀತಿ ಒಟ್ಟಿಗೆ ಇದ್ದಾಗ ನಾನು ನನ್ನ ಅಕ್ಕನ ಮಾತು ಕೇಳಿ ಅರ್ಜಿದಾರಳಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಅರ್ಜಿದಾರಳ ವೈವಾಹಿಕ ಜೀವನದಿಂದ 2 ನೇ ಅರ್ಜಿದಾರಳು ಜನಿಸಿರುತ್ತಾಳೆ ಎಂದರೆ ಸರಿಯಲ್ಲ. ನಿಪಿ 1 ರಿಂದ 4 ರಲ್ಲಿ 2 ನೇ ಅರ್ಜಿದಾರರ ತಂದೆ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ನಿಪಿ 1 ರಿಂದ 4 ರಲ್ಲಿ ನಾನು 2 ನೇ ಅರ್ಜಿದಾರಳ ತಂದೆ ಮತ್ತು 1 ನೇ ಅರ್ಜಿದಾರಳ ಗಂಡ ಎಂದು ನಮೂದು ಆಗಿರುವ ವಿಚಾರ ಗೊತ್ತಿಲ್ಲ.

ನಾನು ನ್ಯಾಯಾಲಯಕ್ಕೆ ಹಾಜರಾದ ನಂತರ ಅರ್ಜಿದಾರಳು ಏನೇನು ದಾಖಲೆ ಸಲ್ಲಿಸಿರುತ್ತಾರೆ ಎಂದು ನಿಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೇನೆ ಎಂದು ನುಡಿದು ಅದಕ್ಕೂ ನನಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರನ್ನು 1 ನೇ ಅರ್ಜಿದಾರಳು ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದು ದೂರು ದಾಖಲಿಸಿಲ್ಲ. 2 ನೇ ಅರ್ಜಿದಾರಳು ಪ್ರಥಮ ಪಿಯುಸಿ ಓದುತ್ತಿದ್ದಾಳೆ ಎಂದರೆ ಗೊತ್ತಿಲ್ಲ. ಶಾಲೆ ಮತ್ತು ಕಾಲೇಜು ದಾಖಲಾತಿಗಳಲ್ಲಿ ನನ್ನ ಹೆಸರು ನಮೂದು ಆಗಿದೆ ಎಂದರೆ ನನ್ನದು ಅಲ್ಲ ಎಂದು ನುಡಿಯುತ್ತಾರೆ. 1 ನೇ ಅರ್ಜಿದಾರಳಿಗೆ ಥೈರಾಯಿಡ್ ಮತ್ತು ಆರೋಗ್ಯ

ಸಮಸ್ಯೆ ಇರುವುದರಿಂದ ಅವಳ ಚಿಕಿತ್ಸೆಗೆ ಹೆಚ್ಚು ಹಣ ಖರ್ಚು ಆಗುತ್ತದೆ ಎಂದರೆ ಗೊತ್ತಿಲ್ಲ. ಅದೇ ರೀತಿ 2 ನೇ ಅರ್ಜಿದಾರಳನ್ನು ಕೂಲಿ ಮಾಡಿ ಸಾಕುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು 2 ನೇ ಅರ್ಜಿದಾರರ ತಂದೆ ಎಂದು ನಿರೂಪಿಸಲು DNA ಪರೀಕ್ಷೆಗೆ ಕಳುಹಿಸಲು ನನ್ನದು ಏನು ತಕರಾರು ಇಲ್ಲ. ಅರ್ಜಿದಾರರು ನನ್ನ ಹೆಂಡತಿ ಮತ್ತು ಮಗಳು ಅಲ್ಲ ಎಂದು ದೂರು ಸಲ್ಲಿಸಿರುವುದಿಲ್ಲ. ಅರ್ಜಿದಾರರಿಗೆ ಜೀವನಾಂಶ ಕೊಡಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**